ಹೆಂಡತಿ ಮಾತು ಕೇಳಿ ಬೇರೆ ಮನೆ ಮಾಡಿದ ನಂಜನಿಗೆ ಮನೆ ಚಿಕ್ಕದೆನಿಸಿತು. ತಿಂಗಳ ಬಾಡಿಗೆ ಆರು ಸಾವಿರ ಹೊರೆ ಎನಿಸತೊಡಗಿತು. ಪ್ರೀತಿಸಿ ಮದುವೆಯಾದ ಕಾರಣ ಆಡಲಾರ, ಆಡಿ ಅನುಭವಿಸಲಾರ ಅಂತಾಯಿತು ಅವನ ಪರಿಸ್ಥಿತಿ. ಒಮ್ಮೆ ಅಸಹನೆ ಮೇರೆ ಮೀರಿ 'ನಾವು ಎಂತ ದೊಡ್ಡ ಮನೇಲಿ ಇದ್ವಿ, ನಿನ್ ನಂಬಿ ಬೆಂಕಿ ಪೆಟ್ಟಣದಂತ ಮನೇಲಿ ಒದ್ದಾಡೋ ಅಂಗಾಯ್ತು' ಎಂದ. ಅದಕ್ಕೆ ಉತ್ತರಿಸಿದ ಹೆಂಡತಿ, 'ನಾನ್ ಬೆಳೆದದ್ದು ಎರಡಂತಸ್ತಿನ 33 ರೂಮ್‌ಗಳಿದ್ದ ದೊಡ್ಡ ಬಿಲ್ಡಿಂಗ್‌ನಲ್ಲಿ ಗೊತ್ತಾ? ನಿನಗೋಸ್ಕರ ಇಲ್ಲಿ ಕಾಲ ಹಾಕ್ತಾ ಇದೀನಿ. ಸುಮ್ನೆ ಜಾಸ್ತಿ ಮಾತಾಡ್ಬೇಡ' ಅಂದಳು. ಸಿಟ್ಟೆಗೆದ್ದ ನಂಜ, 'ಅದ್ಯಾವುದೇ ನಾನ್ ಕಾಣದ್ದು, ಎರಡು ಹಂತಸ್ತಿನ 33 ರೂಮ್‌ಗಳ ಮನೆ' ಎಂದು ಪ್ರಶ್ನಿಸಿದ. ಅದಕ್ಕೆ ಹೆಂಡತಿ, 'ಅದೇ... ನಾನು ಓದಿ, ಬೆಳೆದ ಸರ್ಕಾರಿ ಹಾಸ್ಟೆಲ್' ಎಂದಳು.

***




ಸೇಲ್ಸ್‌ಮನ್: ನೋಡಿ ಮೇಡಂ, ಇದು ರೀಸೆಂಟಾಗಿ ಬಂದಿರೊ ಒಳ್ಳೆ ಕ್ವಾಲಿಟಿ ಬಟ್ಟೆ. ಎಕ್ಸ್‌ಕ್ಲೂಸಿವ್ ಆಗಿ ನಮ್ಮ ಅಂಗಡಿಯಲ್ಲಿ ಮಾತ್ರ ಲಭ್ಯ.
ಮಹಿಳೆ: ಕಲರ್ ಹೋಗಲ್ಲ ತಾನೆ?
ಸೇಲ್ಸ್‌ಮನ್: ಪ್ರತಿ ಒಗೆತಕ್ಕೂ ಹಳೆ ಕಲರ್ ಹೋಗಿ, ಹೊಸ ಹೊಸ ಕಲರ್ ಬರುತ್ತೆ. ಅದರ ಬಗ್ಗೆ ನೀವು ಚಿಂತೆ ಬಿಡಿ!

***

ತಾನು ವಾಸವಿದ್ದ ಬೀದಿಯ ಕ್ಲಿನಿಕ್‌ನಲ್ಲಿ ವೈದ್ಯರು ಖಾಲಿ ಇದ್ದರು, ಇದನ್ನು ಕಂಡ ನಂಜ ಒಳ ಹೋದ.
ನಂಜ: ಸರ್, ಗ್ಯಾಸ್ಟ್ರಿಕ್ ಸಮಸ್ಯೆ ಜಾಸ್ತಿ ಆಗ್ಬಿಟ್ಟಿದೆ. ಏನು ಮಾಡಲಿ?
ಡಾಕ್ಟರ್: ಟೈಮ್ ಟು ಟೈಮ್ ಊಟ ಮಾಡು, ಕಾಫಿ, ಟೀ ಬಿಟ್ ಬಿಡು, ಸರಿ ಹೋಗುತ್ತೆ.
ನಂಜ: ಮತ್ತೇನ್ ಕುಡೀಲಿ ಸರ್?
ಡಾಕ್ಟರ್: ಬೇಕಾದ್ರೆ ಹಾರ್ಲಿಕ್ಸ್ ಕುಡಿ.
ನಂಜ: ಗ್ಯಾಸ್ಟ್ರಿಕ್ ಹೋಗುತ್ತೆ ಅಂದ್ರೆ ಆರ್ ಲಿಕ್ಸ್ ಏನು... ಎಂಟ್ ಲಿಕ್ಸ್ ಬೇಕಾದ್ರೆ ಕುಡಿತೀನಿ. ಈ ಲಿಕ್ಸ್ ಎಲ್ಲಿ ಸಿಗುತ್ತೆ ಸರ್?

***

ಬಸ್‌ನಲ್ಲಿ ಪ್ರಯಾಣ ಮಾಡುತ್ತಿದ್ದ ಮಂಜ ತನ್ನ ಪಕ್ಕದ ಸೀಟಿನಲ್ಲಿ ಕುಳಿತ ವ್ಯಕ್ತಿಯನ್ನ 'ಸ್ಸಾರ್ ಟೈಮೆಷ್ಟು' ಎಂದು ಕೇಳಿದ.
ಆತ: ನೀವು ಗಡಿಯಾರ ಕಟ್ಟಿದ್ದೀರಲ್ವ ನೋಡ್ಕೊಳ್ಳಿ.
ಮಂಜ: ನನ್ ಟೈಮ್ ಸರಿ ಇಲ್ಲ. ಅದ್ಕೆ ನೀವೆ ಹೇಳಿ!

***

ಆರನೆಯ ತರಗತಿಯ ಸಮಾಜವಿಜ್ಞಾನ ಪರೀಕ್ಷೆಯ ಪ್ರಶ್ನೆ ಪತ್ರಿಕೆಯಲ್ಲಿ 'ಪರಿಸರ ಸಂರಕ್ಷಣೆ ಕುರಿತಾಗಿ ಎಂಟು ಹತ್ತು ವಾಕ್ಯಗಳಲ್ಲಿ ಪ್ರಬಂಧ ಬರೆಯಿರಿ' ಎಂಬ ಪ್ರಶ್ನೆ ಇತ್ತು. ಅದಕ್ಕೆ ನಂಜನ ಮಗ ಪುಟ್ನಂಜ 'ತಾಗಿಸಿಕೊಳ್ಳಲು ನಮ್ಮ ಮನೆಯಲ್ಲಿ ಕುರಿಯೆ ಇಲ್ಲ. ಹಾಗಾಗಿ ಈ ಪ್ರಶ್ನೆಗೆ ನಾನು ಉತ್ತರ ಬರೆಯುವುದಿಲ್ಲ' ಎಂದು ಬರೆದ!

***

ಮಣ್ಣಿನ ಸಂರಕ್ಷಣೆ ಬಗ್ಗೆ ಭಾಷಣ ಮಾಡುತ್ತಿದ್ದ ಪರಿಸರ ಹೋರಾಟಗಾರ್ತಿ ರತ್ನಮಂಜರಿ 'ಮಣ್ಣಿನ ಸಂರಕ್ಷಣೆ ನಮ್ಮೆಲ್ಲರ ಹೊಣೆ, ಅದರ ಫಲವತ್ತತೆ ಹಾಳಾಗದಂತೆ ಕಾಪಾಡುವ ಜವಾಬ್ದಾರಿ ಎಲ್ಲರ ಮೇಲೂ ಸದಾಕಾಲಕ್ಕೂ ಇದ್ದೇ ಇರುತ್ತೆ. ಉತ್ತಮ ಮಣ್ಣನ್ನು ಮುಂದಿನ ಪೀಳಿಗೆಗೆ ನೀಡಬೇಕು' ಎಂದು ಮಾತು ಮುಂದುವರೆಸಿದಳು. ಅಷ್ಟರಲ್ಲಿ ಸಭಿಕರ ಸಾಲಿನಲ್ಲಿ ಇದ್ದ ನಂಜ, 'ಮಣ್ಣಿನ ಸಂರಕ್ಷಣೆಗೆ ನಿಮ್ಮ ಕೊಡುಗೆ ಏನು ಅಂತ ಮೊದ್ಲು ಹೇಳಿ' ಎಂದ. ಅದಕ್ಕುತ್ತರಿಸಿದ ರತ್ನಮಂಜರಿ, 'ನಾನು ಗರ್ಭಿಣಿ ಆಗಿದ್ದಾಗಲೂ ಒಂಚೂರೂ ಮಣ್ಣು ತಿನ್ನಿಲ್ಲ' ಎಂದಳು. ಸಭಿಕರ ಚಪ್ಪಾಳೆ ಮೊಳಗಿತು ವಾವ್ ವಾವ್ ಎಂದು!

***

ವೇದಿಕೆಯ ಮೇಲೆ ಭಾಷಣ ಮಾಡುತ್ತಿದ್ದ ವಿರೋಧ ಪಕ್ಷದ ಮಂಜ, 'ಈ ಆಡಳಿತ ಪಕ್ಷದೋರು ಮಹಾತ್ಮ ಗಾಂಧಿಯವರ ವಿಚಾರಗಳ ಬಗ್ಗೆ ಹಗುರವಾದ ಧೋರಣೆ ಇಟ್ಕೊಂಡಿದಾರೆ, ಅವ್ರ ಬಗ್ಗೆ ಒಂಚೂರೂ ಗೌರವ ಇಲ್ಲ' ಎಂದ. ಸಭಿಕರ ಕುರ್ಚಿಯಲ್ಲಿ ಕುಳಿತಿದ್ದ ನಂಜ, 'ಅಂತದ್ದು ಮಾಡಬಾರ್ದು ಏನ್ ಮಾಡವ್ರೆ' ಎಂದು ಪ್ರಶ್ನಿಸಿದ? ಅದಕ್ಕೆ ಮಂಜ, 'ಅವರ ಪ್ರಭಾವ ತಗ್ಗಿಸಲು ಅವ್ರ ನೋಟುಗಳ ಬದಲಿಗೆ ಕ್ಯಾಶ್ ಲೆಸ್ ವ್ಯವಹಾರ ಪ್ರಚುರ ಪಡಿಸ್ತವ್ರೆ' ಎಂದ!

ಸಂಗ್ರಹ:
ಮಲ್ಲಿಕಾರ್ಜುನ ಸುರದೇನಪುರ

## ನಗು-ನಗ್ನ ಸತ್ಯ

ಹಿಂದೆ ಮನೆಗೆ ನೆಂಟರು ಬಂದರೆ ಬೆಲ್ಲ ನೀರು ನೀಡುವ ಪದ್ಧತಿಯಿತ್ತು. ಇಂದು ಅತಿಥಿಗಳು ಆಗಮಿಸಿದರೆ ಮೊಬೈಲ್ ಚಾರ್ಜರ್ ಮತ್ತು ವೈ–ಫೈ ನೀಡುವುದು ಅನಿವಾರ್ಯವಾಗಿದೆ.

***

ರಾತ್ರಿ ಅಚಾನಕ್ಕಾಗಿ ಮೊಬೈಲಿನ ಬ್ಯಾಲೆನ್ಸ್ ಖಾಲಿಯಾದರೆ, ಎದುರಲ್ಲಿ ಮಾತನಾಡಬೇಕಿರುವ ವ್ಯಕ್ತಿ ಮರುದಿನ ಬೆಳಗ್ಗೆಯ ತನಕ ಬದುಕಿರುವುದಿಲ್ಲವೇನೋ ಎನ್ನುವಷ್ಟರ ಮಟ್ಟಿಗೆ ಮೊಬೈಲ್ ಬಳಕೆದಾರರು ಚಿಂತಿತರಾಗುತ್ತಾರೆ!

***

ಕೆಲವರು ತಮ್ಮ ಮೊಬೈಲ್‌ಗೆ ಹಾಕುವ ಪ್ಯಾಟರ್ನ್ ಲಾಕ್ ಅನ್ನು, ಅದರೊಳಗೆ ಅತಿ ಮಹತ್ವದ ರಾಜತಾಂತ್ರಿಕ ರಹಸ್ಯಗಳು ಅಡಗಿವೆಯೇನೋ ಎನ್ನುವಷ್ಟರ ಮಟ್ಟಿಗೆ ಕ್ಲಿಷ್ಟಕರ ವಿನ್ಯಾಸದಲ್ಲಿ ಅಳವಡಿಸುತ್ತಾರೆ!

***

ಕೆಲವರು ತಮ್ಮ ಮೊಬೈಲ್‌ನಲ್ಲಿ ಶೇ. 12 ರಷ್ಟು ಬ್ಯಾಟರಿ ಬಾಕಿಯಿದೆಯೆನ್ನುವಾಗ ಚಾರ್ಜರ್‌ನತ್ತ ಧಾವಿಸುವ ಪರಿ, ಆಸ್ಪತ್ರೆಯ ತುರ್ತು ನಿಗಾಘಟಕದಲ್ಲಿರುವ ರೋಗಿಯನ್ನು ಉಳಿಸಲು ಶತಪ್ರಯತ್ನ ಪಡುತ್ತಾ ಓಡಾಡುವ ವೈದ್ಯರು ಹಾಗೂ ಆಸ್ಪತ್ರೆಯ ಸಿಬ್ಬಂದಿಗಳನ್ನು ನೆನಪಿಸುತ್ತದೆ!

***

ಕಣ್ತಪ್ಪಿನಿಂದಾಗಿ ಗೆಳೆಯರೊಬ್ಬರ ಮನೆಯಲ್ಲಿ ಮೊಬೈಲ್ ಬಿಟ್ಟು ಬಂದರೆ, ತನ್ನ ಮುಗ್ಧೆ ಗರ್ಲ್ ಫ್ರೆಂಡ್ ಅನ್ನು ಖಳನಾಯಕನ ಮನೆಯಲ್ಲಿ ಬಿಟ್ಟು ಬಂದಂತೆ ಭಾಸವಾಗುತ್ತದೆ!

ಸಂಗ್ರಹ: ರಮಣ್ ಶೆಟ್ಟಿ ರೆಂಜಾಳ್,
ಮುಂಬೈ

